## 1 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ರವರ ನ್ಯಾಯಾಲಯ, ನಂಜನಗೂಡು

## ಸಿ.ಸಿಃ 1713/2013

| | | |
|---|---|---|
| ಸಾಕ್ಷಿದಾರರ ಹೆಸರು | ಮಲ್ಲಿಕಾರ್ಜುನ | ಫ್ರಾಸಾಃ 02 |
| ತಂದೆಯ/ಗಂಡನ ಹೆಸರು | ಸಿಂಗ್ರಯ್ಯ | ಚಾಸಾಃ 02 |
| ವಯಸ್ಸು | 58 ವರ್ಷ | |
| ಕೆಲಸ | ಭೂ ಮಾಪಕರು, ನಂಜನಗೂಡು | ಸಾ ಪ್ರ ಬೋ |
| ವಾಸ | ನಂಜನಗೂಡು | ದಿಃ 30.06.2025 |

## ಮುಖ್ಯ ವಿಚಾರಣೆ ಫ್ರಾಜ್ಞ ಸ.ಸ.ಅ ರವರಿಂದಃ

ನಾನು 2005 ರಿಂದ 2021 ರವರೆಗೆ ತಾಲೂಕು ಕಛೇರಿ ನಂಜನಗಗೂಡಿನಲ್ಲಿ ಭೂ ಮಾಪಕರಾಗಿ ಕೆಲಸ ನಿರ್ವಹಿಸಿರುತ್ತೇನೆ.

ಚಾಸಾ 1 ರವರು ಬದನವಾಳು ಗ್ರಾಮದ ಸರ್ವೆ ನಂ. 435 ರಲ್ಲಿ ಒಟ್ಟು 7 ಎಕರೆ 36 ಗುಂಟೆ ಕೆರೆ ಜಾಗವನ್ನು ಅಳತೆ ಮಾಡಿ ವರದಿ ನೀಡುವಂತೆ ಸೂಚಿಸಿದ್ದು ಅದರಂತೆ ನಾನು ಸದರಿ ಜಾಗವನ್ನು ಅಳತೆ ಮಾಡಿ ಒತ್ತುವರಿಯಾಗಿದೆ ಎಂದು ನಾನು ವರದಿ ನೀಡಿರುತ್ತೇನೆ. ಈ ಸಂಬಂಧ ನಾನು ನಕ್ಷೆಯನ್ನು ಹಾಜರುಪಡಿಸಿರುತ್ತೇನೆ. ನಾನು ಪೊಲೀಸರ ಮುಂದೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆಯನ್ನು ನಿ.ಪಿ. 2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯು ಭಾಗಶಃ ಸಾಕ್ಷಿ ನುಡಿಯುತ್ತಿದ್ದಾರೆ. ಮಾನ್ಯ ಎ.ಪಿ.ಪಿ.ಯವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು)

**ಸಿ.ಸಿಃ 1713/2013**

**ಫ್ರಾಸಾಃ 02 ಚಾಸಾಃ 02**

**ಪಾಟೀ ಸವಾಲುಃ ಫ್ರಾಜ್ಞ ಸ.ಸ.ಅ ರವರಿಂದಃ**

ಬದನವಾಳು ಗ್ರಾಮದ ಕಸಬಾ ಹೋಬಳಿ ಸರ್ವೆ ನಂ. 435 ರಲ್ಲಿ ಒಟ್ಟು 7 ಎಕರೆ 36 ಗುಂಟೆ ಸರ್ಕಾರಿ ಕೆರೆ ಇದ್ದು ಈ ಕೆರೆಯೂ ಸಂಪೂರ್ಣವಾಗಿ ಸರ್ಕಾರದ ಆಸ್ತಿಯಾಗಿದ್ದು ಈ ಕೆರೆಯನ್ನು ಸರ್ಕಾರದಿಂದ ಅಳತೆ ಮಾಡಿಸಿ ಕೆರೆಯಾಗಿ ಬಿಡಲಾಗಿದ್ದು ಈ ಜಾಗವನ್ನು ಬದನವಾಳು ಗ್ರಾಮದ ಮಹದೇವಪ್ಪ ಬಿನ್ ಚನ್ನಬಸಪ್ಪ, ರೇವಣ್ಣ ಬಿನ್ ಲೇಃ ಶಿವಣ್ಣ, ರಾಜೇಶ ಬಿನ್ ಲೇಃ ನಂಜಪ್ಪ, ಚಿಕ್ಕತಾಯಮ್ಮ ಕೋಂ ಲೇಃ ಎಸ್. ರಾಮಣ್ಣ, ಎಂ.ನಂಜಪ್ಪ ಬಿನ್ ಲೇಃ ಮೊಳಪ್ಪ, ಬಿ.ಎಸ್.ಚಂದ್ರು ಬಿನ್ ಗುರುಪಪ್ಪ ಸಣ್ಣಪ್ಪ ಇವರು ಅಕ್ರಮವಾಗಿ ಹಿತ್ತಲುಗಳನ್ನು ಮಾಡಿಕೊಂಡು ಸರ್ಕಾರಿ ಕೆರೆಯ ಜಾಗವನ್ನು ಒತ್ತುವರಿ ಮಾಡಿಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಬದನವಾಳು ಗ್ರಾಮ ಪಂಚಾಯ್ತಿಯ ಗ್ರಾಮ ಲೆಕ್ಕಾಧಿಕಾರಿಯವರಾದ ಚಾಸಾ 5 ಮತ್ತು ಚಾಸಾ 3 ರಾಜಸ್ವ ನಿರೀಕ್ಷಕರು ಈ ಹಿಂದೆ 2-3 ಬಾರಿ ಮೇಲ್ಕಂಡವರಿಗೆ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಸರ್ಕಾರಕ್ಕೆ ಬಿಟ್ಟುಕೊಡುವಂತೆ ತಿಳಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಂಜನಗೂಡು ತಹಸೀಲ್ದಾರ್ ರವರು ದಿಃ 12.12.2011 ರಂದು ಎಲ್ಲರಿಗೂ ಒತ್ತುವರಿ ಮಾಡಿಕೊಂಡಿರುವ ಜಾಗವನ್ನು ಸರ್ಕಾರಕ್ಕೆ ಬಿಟ್ಟುಕೊಡುವಂತೆ ನೋಟಿಸು ಕಳುಹಿಸಿದ್ದರೂ ಸಹ ಒತ್ತುವರಿ ಜಾಗವನ್ನು ಬಿಟ್ಟುಕೊಡದೇ ಇದ್ದುದ್ದರಿಂದ ದಿಃ 16.01.2012 ರಂದು ಚಾಸಾ 1 ರವರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ ದೂರ ದಾಖಲಿಸಿರುವ ವಿಚಾರ ಎಂದರೆ ತಿಳಿದು ಬಂದಿರುತ್ತದೆ ಎಂದರೆ ಸರಿಯಲ್ಲ. ಈಗ ಓದಿ ಕೇಳಿಸಿಕೊಂಡ ನಿ.ಪಿ. 2 ರಂತೆ ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ ಎಂದು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿ ಪರ ವಕೀಲರಿಂದ ಇಲ್ಲ ಎಂದು ತಿಳಿಸಿರುತ್ತಾರೆ.

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

**1 ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ,**
**ನಂಜನಗೂಡು**